# ಗಾರ್ಮೆಂಟ್ಸ್ ಕಾರ್ಮಿಕರಿಗೆ ಏಪ್ರಿಲ್ 2010 ರಿಂದ ಕನಿಷ್ಠ ವೇತನ ರೂ. 146.20 ದೊರೆಯಲೇಬೇಕು !!! . . . .

*ಗಾರ್ಮೆಂಟ್ಸ್ ಕಾರ್ಮಿಕರಿಗೆ, ಸರ್ಕಾರವು ಕನಿಷ್ಠ ವೇತನವನ್ನು ಹೆಚ್ಚಿಸಿದ್ದು, 2010 ರ ಏಪ್ರಿಲ್‌ನಿಂದ ತುಟ್ಟಿಭತ್ಯೆ(ಡಿಎ)ಯೂ ಸೇರಿ, ಕುಶಲವಲ್ಲದವರಿಗೆ ಅಂದರೆ ಹೆಲ್ಪರ್‌ಗಳಿಗೆ 146.20 ರೂ ಕನಿಷ್ಠ ವೇತನ ಸಿಗಲೇಬೇಕು. ಈ ವೇತನಕ್ಕಿಂತ ಕಡಿಮೆ ದೊರೆತಲ್ಲಿ, ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಅನ್ನು ಸಂಪರ್ಕಿಸಿ.*

ಆತ್ಮೀಯ ಕಾರ್ಮಿಕರೇ,

ಗಾರ್ಮೆಂಟ್ಸ್ ಕಾರ್ಮಿಕರ ಪರಿಸ್ಥಿತಿಯನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ GATWU ಕೆಲಸ ಮಾಡುತ್ತಿದೆ. ಗಾರ್ಮೆಂಟ್ಸ್ ಕಾರ್ಮಿಕರಿಗೆ ದಿನವೊಂದಕ್ಕೆ ಕನಿಷ್ಠ ರೂ. 200 ರೂ ಸಿಗಬೇಕೆಂದು ಕಳೆದ ಎರಡು ವರ್ಷಗಳಿಂದ ಆಂದೋಲನ ನಡೆಸುತ್ತಾ ಬಂದಿದೆ. ಈ ಪ್ರಯತ್ನದ ಫಲವಾಗಿ ಸರ್ಕಾರವು 2009 ರ ಏಪ್ರಿಲ್ ನಲ್ಲಿ ಕನಿಷ್ಠ ವೇತನವನ್ನು ತುಟ್ಟಿಭತ್ಯೆಯೂ ಸೇರಿದಂತೆ, 101.70 ರೂ. ನಿಂದ 127.00 ಕ್ಕೆ ಏರಿಸಿತು.

ಆದರೆ ಕಾರ್ಖಾನೆಗಳ ಆಡಳಿತವರ್ಗದವರು ಈ ಕನಿಷ್ಠ ವೇತನವನ್ನು ಜಾರಿಗೊಳಿಸಲಿಲ್ಲ. ಇದರ ಬಗ್ಗೆ GATWU ಹಲವಾರು ಬಾರಿ ಸರ್ಕಾರಕ್ಕೆ, ಮಾಲೀಕರ ಸಂಘಕ್ಕೆ, ಹಾಗೂ ಪ್ರಮುಖ ಕಾರ್ಖಾನೆಗಳ ಮುಖ್ಯಸ್ಥರಿಗೆ ಪತ್ರವನ್ನು ಬರೆಯುತ್ತಲೇ ಬಂದಿದ್ದು, ಹೆಚ್ಚಾಗಿರುವ ಕನಿಷ್ಠ ವೇತನವನ್ನು ಕಾರ್ಮಿಕರಿಗೆ ನೀಡಬೇಕೆಂದು ಆಗ್ರಹಿಸಿತ್ತು.

ಇದರಿಂದ ಫಲಿತಾಂಶ ಕಾಣದೇ ಹೋದಾಗ, GATWUವು, ಈ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿತು. GATWUನ ಮನವಿಯನ್ನು ಮನ್ನಿಸಿ, ಉಚ್ಚ ನ್ಯಾಯಾಲಯವು, ಸರ್ಕಾರಕ್ಕೆ ಹಾಗೂ ಕಾರ್ಖಾನೆಗಳ ಮುಖ್ಯಸ್ಥರಿಗೆ ನೋಟೀಸು ನೀಡಲು ಆದೇಶಿಸಿದೆ.

**ಇದರೊಂದಿಗೆ ಕಳೆದ ಏಪ್ರಿಲ್ ತಿಂಗಳಿನಿಂದ ಕಾರ್ಮಿಕರಿಗೆ ಬರಬೇಕಾದ ಬಾಕಿ ವೇತನಕ್ಕಾಗಿಯೂ GATWU ಆಗ್ರಹಿಸುತ್ತಿದೆ.**

ಕಾರ್ಮಿಕರಿಗೆ ಕನಿಷ್ಠ ವೇತನ ಹಾಗೂ ಗೌರವಯುತ ವೇತನವನ್ನು ದೊರಕಿಸಿಕೊಡುವುದು GATWUವಿನ ಪ್ರಮುಖ ಆದ್ಯತೆಯಾಗಿದ್ದು, ಕಾರ್ಮಿಕರಿಗೆ ಈ ವೇತನವು ಸಿಗುವವರೆಗೂ GATWU ತನ್ನ ಹೋರಾಟವನ್ನು ಮುಂದುವರೆಸುತ್ತದೆ.

**ಏಪ್ರಿಲ್ 2010 ರಿಂದ ಕಾರ್ಮಿಕರಿಗೆ ಸಿಗಬೇಕಾದ ಕನಿಷ್ಠ ವೇತನದ ವಿವರ ಈ ಕೆಳಗಿನಂತೆ ಇದೆ.**

| ಕ್ರಮ ಸಂಖ್ಯೆ | ಕೆಲಸದ ಶ್ರೇಣಿ | ಮೂಲವೇತನ ರೂ. | ತುಟ್ಟಿಭತ್ಯೆ (ಡಿ.ಎ.) (ಏಪ್ರಿಲ್ 2010) ರೂ. | ಒಟ್ಟು ವೇತನ ರೂ. |
|---|---|---|---|---|
| 1 | ಅತಿ ಕುಶಲ (High Skilled) | **96.20** | **57.30** | **153.50** |
| 2. | ಕುಶಲ (Skilled) | **95.00** | **57.30** | **152.30** |
| 3 | ಅರೆಕುಶಲ (Semi Skilled)<br>ಮೆಷರ್‌ಮೆಂಟ್ ಚೆಕರ್/ಐರನರ್<br>ಕಾಜಾ/ಬಟನ್/ಓವರ್‌ಲಾಕ್ ಮಶೀನ್ ಆಪರೇಟರ್ | **93.60** | **57.30** | **150.90** |
| 4 | ಕುಶಲವಲ್ಲದ (Unskilled)<br>ಪ್ಯಾಕರ್/ ಹೆಲ್ಪರ್ / ಫೀಡಿಂಗ್ ಹೆಲ್ಪರ್/ಟ್ರಿಮ್ಮರ್<br>ಆಫೀಸ್ ಬಾಯ್/ಲೇ ಹಾಕುವವರು<br>ಇತರೇ ಯಾವುದೇ ತರಬೇತಿಯಿಲ್ಲದ ಕಾರ್ಮಿಕರು | **88.90** | **57.30** | **146.20** |

ಈ ಪಟ್ಟಿಯಲ್ಲಿರುವುದಕ್ಕಿಂತ ಕಡಿಮೆ ವೇತನ ದೊರೆತಲ್ಲಿ, ಕಾರ್ಮಿಕರು (GATWU) ಅನ್ನು ಈ ಮೊಬೈಲ್ ಸಂಖ್ಯೆಗಳಲ್ಲಿ ಸಂಪರ್ಕಿಸಬಹುದು.

**98803 71922, 96865 37087, 94498 89183, 98449 59210**


**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**

ಮೈಸೂರು ರಸ್ತೆ ಕಚೇರಿ: ನ08/3, ಶ್ರೀಮಾತಾ ನಿಲಯ, ನ್ಯೂ ಟಿಂಬರ್‌ಯಾರ್ಡ್‌ಲೇಔಟ್, ಮೈಸೂರು ರಸ್ತೆ, ಬೆಂಗಳೂರು-560 027, ದೂರವಾಣಿ : 26751320

ಪೀಣ್ಯ ಕಚೇರಿ: ನಂ. 91, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಮೂರನೇ ಹಂತ, ಗಣಪತಿ ನಗರ, ಪೀಣ್ಯ, ಬೆಂಗಳೂರು -560 058 ದೂರವಾಣಿ: 28364679